## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** Shree Siddaganga Institute of Nursing Sciences and Research center, Tumkur ಈ ಕಾಲೇಜಿನಲ್ಲಿ ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ನ ಪ್ರವೇಶ ಮಿತಿಯನ್ನು 60ರಿಂದ 250ಕ್ಕೆ ಹೆಚ್ಚಿಸಲು ಅನಮತಿ ನೀಡುವ ಬಗ್ಗೆ.

**ಓದಲಾಗಿದೆ:** ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: RGUHS/AFF/NSG/Enhancementr/B.Sc(N)/2024-25, ದಿನಾಂಕ:28.11.2024

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರು Sree Siddaganga Education Society (R) ಇವರ Shree Siddaganga Institute of Nursing Sciences and Research center, B.H.Road, Tumkur-572102 ಈ ಕಾಲೇಜಿನಲ್ಲಿ 2024-25ನೇ ಸಾಲಿನಿಂದ ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ನ ಪ್ರವೇಶ ಮಿತಿಯನ್ನು 60 ಸೀಟುಗಳಿಂದ 250 ಸೀಟುಗಳಿಗೆ ಹೆಚ್ಚಿಸಲು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994 ರ ಕಲಂ 45(2) ರಡಿ ಸಂಸ್ಥೆಯು ಸಲ್ಲಿಸಿದ್ದ ಅರ್ಜಿಯನ್ನು, ಸ್ಥಳೀಯ ತಪಾಸಣಾ ಸಮಿತಿಯ ವರದಿಯನ್ನು, ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ಸಮಿತಿಯ ನಿರ್ಣಯವನ್ನು ಸಲ್ಲಿಸುತ್ತಾ, ಈ ಸಂಸ್ಥೆಯಲ್ಲಿ ಮೇಲ್ಕಂಡ ಕೋರ್ಸ್‌ನ ಪ್ರವೇಶ ಮಿತಿಯನ್ನು 2024-25ನೇ ಸಾಲಿನಿಂದ 60 ಸೀಟುಗಳಿಂದ 250 ಸೀಟುಗಳಿಗೆ ಹೆಚ್ಚಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ದಿನಾಂಕ:05.12.2024 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಶಿಫಾರಸ್ಸು ಮಾಡಿದನ್ವಯ Sree Siddaganga Education Society (R) ಇವರ Shree Siddaganga Institute of Nursing Sciences and Research Center, B.H.Road, Tumkur-572102 ಈ ಕಾಲೇಜಿನಲ್ಲಿ ಬಿಎಸ್ಸಿ ನರ್ಸಿಂಗ್ ಕೋರ್ಸ್‌ನ ಪ್ರವೇಶಮಿತಿಯನ್ನು 2024-25ನೇ ಸಾಲಿನಿಂದ 60 (ಅರವತ್ತು) ಸೀಟುಳಿಂದ 250 (ಎರಡು ನೂರ ಐವತ್ತು) ಸೀಟುಗಳಿಗೆ ಹೆಚ್ಚಿಸಲು ಅನಮತಿ ನೀಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 599 ಎಂಎಂಸಿ 2024, ಬೆಂಗಳೂರು,ದಿನಾಂಕ:10/12/2024

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994 ರ ಕಲಂ 45(5)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, Sree Siddaganga Education Society (R) ಇವರ Shree Siddaganga Institute of Nursing Sciences and Research Center, B.H.Road, Tumkur-572102 ಈ ಬಿ, ಎಸ್ಸಿ ನರ್ಸಿಂಗ್ ಕೋರ್ಸ್‌ನ ಪ್ರವೇಶಮಿತಿಯನ್ನು 2024-25ನೇ ಸಾಲಿನಿಂದ 60 (ಅರವತ್ತು) ಸೀಟುಳಿಂದ 250 (ಎರಡು ನೂರ ಐವತ್ತು) ಸೀಟುಗಳಿಗೆ ಹೆಚ್ಚಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನಮತಿ ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು**

1. ಸರ್ಕಾರದ ಆದೇಶ ಹೊರಡಿಸಿದ ನಂತರ ಅಂದರೆ, 2024-25ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶ ಮಿತಿ ಹೆಚ್ಚಿಸಿರುವ ಸೀಟುಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳತಕ್ಕದ್ದು.
2. ಈ ಸಂಸ್ಥೆಯು ಮೇಲ್ಕಂಡ ಕೋರ್ಸಿನ ಶೇ.20 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.
3. ಮೇಲ್ಕಂಡ ಕೋರ್ಸುಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.
4. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ನಿಗದಿ ಪಡಿಸಿರುವ ಷರತ್ತು/ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಸದರಿ ಟ್ರಸ್ಟ್/ಸಂಸ್ಥೆ/ಸಂಘವು ನರ್ಸಿಂಗ್ ಕಾಲೇಜನ್ನು ಪ್ರಾರಂಭಿಸಲು ಐ.ಎನ್.ಸಿ/ನಿಯಮಾನುಸಾರ ಅಗತ್ಯವಿರುವ ಕಟ್ಟಡ/ಮೂಲಭೂತ

Institute of Nursing Sciences & Research Centre · TUMKUR · No. 37 Date 12/12/24

H R ... 12/12/2024

Scanned with CamScanner

ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.

5. ಸದರಿ ಸಂಸ್ಥೆಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅನುಮೋದನೆ ಪಡೆದ ನಂತರವೇ, ನಿಗಧಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕು ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991 ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
6. ರಾಜ್ಯ ಸರ್ಕಾರ ಮತ್ತು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಸದರಿ ಸಂಸ್ಥೆಯು ಸ್ವಂತ ಆಸ್ಪತ್ರೆಯನ್ನು ಸರ್ಕಾರ ನಿಗಧಿಪಡಿಸಿದ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.
8. ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್, ಫಾರ್ಮಸಿ ಮತ್ತು ಫಿಜಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಮೇಲ್ಕಂಡ ಕೋರ್ಸಿನ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ದಿಷ್ಟ ಅನುಪಾತದಲ್ಲಿ ಪ್ರತಿಬಂದಿಸುವ ಪ್ರಕಾರವೇ ಮಾಡತಕ್ಕದ್ದು.
9. ಮೇಲ್ಕಂಡ ಸಂಸ್ಥೆಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಸಂಸ್ಥೆಯಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.
10. ಟ್ರಸ್ಟ/ಸಂಸ್ಥೆ/ಸಂಘಗಳು ಚಾಲ್ತಿಯಲ್ಲಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
11. ಟ್ರಸ್ಟ/ಸಂಸ್ಥೆ/ಸಂಘಗಳು/ಇತ್ಯಾದಿಗಳನ್ನು ಬೇರೆಯವರಿಂದ ಖರೀದಿ/ಮಾರಾಟ ಮಾಡಿರುವುದಿಲ್ಲವೆಂಬ ಬಗ್ಗೆ ಹಾಗೂ ನಿಯಮ ಉಲ್ಲಂಘನೆಯಾಗಿ ಮೂಲ ಟ್ರಸ್ಟಿಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲದೆ ಇರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು
12. ಸದರಿ ನರ್ಸಿಂಗ್ ಕಾಲೇಜು ಪ್ರಾರಂಭಿಸಲು ಸ್ವಂತ ಆಸ್ಪತ್ರೆಯ ಸಮರ್ಪಕ ಕ್ಲಿನಿಕಲ್ ಸೌಲಭ್ಯ ಹೊಂದಿರುವ ಬಗ್ಗೆ ಹಾಗೂ ಸದರಿ ಆಸ್ಪತ್ರೆ ನಿಯಮಾನುಸಾರ ಹಾಸಿಗೆ ಸಾಮರ್ಥ್ಯವನ್ನು ಹೊಂದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
13. ಸದರಿ ನರ್ಸಿಂಗ್ ಕಾಲೇಜು ಪ್ರಾರಂಭಿಸಲು ನೀಡಿದ ಬೋಧಕ/ಬೋಧಕೇತರ ಸಿಬ್ಬಂದಿಯ ಬೇರೆ ಯಾವುದೇ ಸಂಸ್ಥೆಗಳಲ್ಲಿ ಪುನರಾವರ್ತನೆ ಆಗದಂತೆ ಆಧಾರ ಲಿಂಕ್ ಹಾಜರಾತಿ ಹೊಂದಿರುವ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು.
14. ಸದರಿ ನರ್ಸಿಂಗ್ ಕಾಲೇಜನ್ನು ಐ.ಎನ್.ಸಿ. ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳು ನಿಯಮಾನುಸಾರ ನಿಗದಿಪಡಿಸಿರುವ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಸಂಬಂಧಪಟ್ಟ ನರ್ಸಿಂಗ್ ಕಾಲೇಜನ್ನು ಸಂಯೋಜನೆಯನ್ನು ಹಿಂಪಡೆದು, ವಿಶ್ವವಿದ್ಯಾಲಯವು ಕಾನೂನು ಕ್ರಮಕೈಗೊಳ್ಳತಕ್ಕದ್ದು.
15. ಸದರಿ ಸಂಸ್ಥೆಯು ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ, 1994 ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 48 ನೇ ಪ್ರಕರಣದಲ್ಲಿ ಪ್ರಸ್ತುತ ಸದರಿ ಸಂಸ್ಥೆಗೆ ನೀಡಲಾಗಿರುವ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.
16. ಪ್ರತಿ ಸಂಸ್ಥೆಯಲ್ಲಿನ ಮಾನವ ಸಂಪನ್ಮೂಲದ ವಿವರಗಳನ್ನು ಆಯಾ ಸಂಸ್ಥೆಗಳ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು. ಒಂದೇ ಸಿಬ್ಬಂದಿಯನ್ನು ಬೇರೆ-ಬೇರೆ ಸಂಸ್ಥೆಗಳಲ್ಲಿ ತೋರಿಸದಂತೆ ಕ್ರಮವಹಿಸತಕ್ಕದ್ದು.ಈ ಬಗ್ಗೆ ವೇತನ ಚೀಟಿ ಹಾಗೂ ಫಾರ್ಮ್F-16ನ್ನು ಪರಿಶೀಲಿಸತಕ್ಕದ್ದು.
17. ಮೂಲಭೂತ ಸೌಲಭ್ಯಗಳ ಬಗ್ಗೆ ಜಿಯೋ-ಟ್ಯಾಗಿಂಗ್ ಮಾಡತಕ್ಕದ್ದು.
18. ಮೇಲ್ಕಂಡ ಸಂಸ್ಥೆಗಳ ಬಗ್ಗೆ ಐಎನ್‌ಸಿ ಮಾರ್ಗಸೂಚಿಯಲ್ಲಿನ ಯಾವುದೇ ಸೌಲಭ್ಯಗಳ ಬಗ್ಗೆ ಕೊರತೆ ಕಂಡುಬಂದಲ್ಲಿ ಸ್ಥಳ ತಪಾಸಣಾ ಸಮಿತಿ ಹಾಗೂ ಆರ್‌ಜಿಯುಹೆಚ್‌ಎಸ್ ಗಳೇ ನೇರ ಹೊಣೆಗಾರರಾಗತಕ್ಕದ್ದು.
19. ಸಂಸ್ಥೆಗಳು ಕ್ಲಿನಿಕಲ್ ಸೌಲಭ್ಯದ ಸಂಬಂಧ ತೋರಿಸುವ ಆಸ್ಪತ್ರೆಗಳಲ್ಲಿ ಇರುವ OPD/IPD ಮಾಹಿತಿಯನ್ನು ನಮೂದಿಸತಕ್ಕದ್ದು.

Scanned with CamScanner

20. ಐಎನ್‌ಸಿ ಮಾರ್ಗಸೂಚಿಯನ್ವಯ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಕಾಲಕಾಲಕ್ಕೆ ಆರ್‌ಜಿಯುಹೆಚ್‌ಎಸ್ ಖಚಿತಪಡಿಸಿಕೊಳ್ಳತಕ್ಕದ್ದು.

21. ಸದರಿ ನರ್ಸಿಂಗ್ ಕಾಲೇಜುಗಳು ಸಂಯೋಜನೆ/ಮಂಜೂರಾತಿ ಇತ್ಯಾದಿಗಳ ಬಗ್ಗೆ ಕಾಲಕಾಲಕ್ಕೆ ಐ.ಎನ್.ಸಿ./ರಾಜ್ಯ ಸರ್ಕಾರ/ವಿಶ್ವವಿದ್ಯಾಲಯ/ಕೆ.ಎನ್.ಸಿ./ಇತರೆ ಸಂಬಂಧಪಟ್ಟ ಪ್ರಾಧಿಕಾರಗಳ ಹೊರಡಿಸುವ ಸುತ್ತೋಲೆ/ಆದೇಶ/ನಿಯಮಗಳು/ಅಧಿಸೂಚನೆ/ ವಿನಿಯಮಗಳು /ಅಧಿನಿಯಮಗಳಲ್ಲಿನ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಿರುವ ಬಗ್ಗೆ ವಿಶ್ವವಿದ್ಯಾಲಯವು ಖಚಿತಪಡಿಸಿಕೊಳ್ಳತಕ್ಕದ್ದು. ಉಲ್ಲಂಘನೆಯಾದ್ದಲ್ಲಿ ಅಥವಾ ತಪ್ಪು ಮಾಹಿತಿ ನೀಡಿದ್ದಲ್ಲಿ, ಸಂಬಂಧಪಟ್ಟ ನರ್ಸಿಂಗ್ ಕಾಲೇಜುಗಳು, ಸಂಬಂಧಪಟ್ಟ ಟ್ರಸ್ಟ್/ಸಂಸ್ಥೆ/ಸಂಘ/ಇತ್ಯಾದಿಗಳ ಮೇಲೆ ಮತ್ತು ತಪಾಸಣಾ/ಶಿಫಾರಸ್ಸು ತಂಡದ ಸದಸ್ಯರ ಮೇಲೆ ವಿಶ್ವವಿದ್ಯಾಲಯವು ಕಾನೂನುಕ್ರಮ ಜರುಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
10/12/24
(ಶಿವಲಿಂಗಪ್ರಭು ವಾಲಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವೈದ್ಯಕೀಯ ಶಿಕ್ಷಣ ಇಲಾಖೆ

ಇವರಿಗೆ:

1. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4 ನೇ ಟಿ ಬ್ಲಾಕ್, ಬೆಂಗಳೂರು -560 041.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿ.ಎಂ.ಸಿ.ಆರ್.ಐ ಹಳೆ ಕಟ್ಟಡ, ಬೆಂಗಳೂರು.
3. ಪ್ರಾಂಶುಪಾಲರು, Shree Siddaganga Institute of Nursing Sciences and Research Center, B.H.Road, Tumkur-572102
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.

H R Mythreye
12/12/2024
PRINCIPAL
Shree Siddaganga Institute of Nursing Sciences & Research Centre
TUMKUR - 572 102

Institute of Nursing Sciences & Research Centre, TUMKUR
No. 37
Date 12/12/24

Scanned with CamScanner

P. B. B. Sc (N).

(6)

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್, ತುಮಕೂರು ಇದಕ್ಕೆ ಪಿ.ಸಿ. ಬಿ.ಎಸ್ಸಿ., ನರ್ಸಿಂಗ್ ಕೋರ್ಸಿಗೆ ಸಂಯೋಜನೆ ನೀಡುವ ಬಗ್ಗೆ.

**ಓದಲಾಗಿದೆ:**

ಪತ್ರ ಸಂಖ್ಯೆ:ACA/NS-50/2010-11, ದಿನಾಂಕ 05.03.2010.

**ಪ್ರಸ್ತಾವನೆ:**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಮೇಲೆ ಓದಲಾದ ತಮ್ಮ ಪತ್ರದಲ್ಲಿ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್, ತುಮಕೂರು ಇದು 2010-11ನೇ ಸಾಲಿನಿಂದ ಪಿ.ಸಿ. ಬಿ.ಎಸ್ಸಿ., ನರ್ಸಿಂಗ್ ಕೋರ್ಸನ್ನು 45 ಸೀಟುಗಳ ವಾರ್ಷಿಕ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ನೀಡಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994ರ ಕಲಂ 45(2) ರಡಿ ಸಲ್ಲಿಸಿದ್ದ ಅರ್ಜಿಯನ್ನು, ಸ್ಥಳೀಯ ತಪಾಸಣಾ ಸಮಿತಿಯ ವರದಿ, ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ನಿರ್ಣಯವನ್ನು ಸಲ್ಲಿಸುತ್ತಾ, ಸಂಯೋಜನೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್, ತುಮಕೂರು ಇದು 2010-11ನೇ ಸಾಲಿನಿಂದ ಪಿ.ಸಿ. ಬಿ.ಎಸ್ಸಿ., ನರ್ಸಿಂಗ್ ಕೋರ್ಸನ್ನು 60 ಸೀಟುಗಳ ವಾರ್ಷಿಕ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ನೀಡಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 34 ಎಂಪಿಎಸ್ 2010, ಬೆಂಗಳೂರು, ದಿನಾಂಕ 10.05.2010**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 1994ರ ಕಲಂ 45(5)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್, ತುಮಕೂರು ಇದು 2010-11ನೇ ಸಾಲಿನಿಂದ ಪಿ.ಸಿ. ಬಿ.ಎಸ್ಸಿ., ನರ್ಸಿಂಗ್ ಕೋರ್ಸನ್ನು 60 (ಅರವತ್ತು) ಸೀಟುಗಳ ವಾರ್ಷಿಕ ಪ್ರವೇಶ ಮಿತಿಯೊಂದಿಗೆ ಹೊಸದಾಗಿ ಪ್ರಾರಂಭಿಸಲು ಸಂಯೋಜನೆ ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರವು ಅನುಮತಿ ನೀಡಿದೆ.

PRINCIPAL
Shree Siddaganga Institute of
Nursing Sciences & Research Centre
TUMKUR - 572 102

## ಷರತ್ತು ಮತ್ತು ನಿಬಂಧನೆಗಳು

1. ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಅಂಡ್ ರೀಸರ್ಚ್ ಸೆಂಟರ್, ತುಮಕೂರು ಇದು ಪಿ.ಸಿ. ಬಿ.ಎಸ್ಸಿ., ನರ್ಸಿಂಗ್ ಕೋರ್ಸಿನ ಶೇ.20ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.
2. ಮೇಲ್ಕಂಡ ನರ್ಸಿಂಗ್ ಕೋರ್ಸುಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ-ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.
3. 1947ರ ಭಾರತೀಯ ನರ್ಸಿಂಗ್ ಕೌನ್ಸಿಲ್ ಅಧಿನಿಯಮ 13ನೇ ಪ್ರಕರಣದಲ್ಲಿ ಭಾರತೀಯ ಶುಶ್ರೂಷಾ ಪರಿಷತ್ತಿನ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಭಾರತೀಯ ನರ್ಸಿಂಗ್ ಪರಿಷತ್ತು ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ಭಾರತೀಯ ಶುಶ್ರೂಷಾ ಪರಿಷತ್ತು ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದತಕ್ಕದ್ದು.
4. ಭಾರತೀಯ ಶುಶ್ರೂಷಾ ಪರಿಷತ್ತಿನ ಅನುಮೋದನೆಯನ್ನು 1947ರ ಭಾರತೀಯ ನರ್ಸಿಂಗ್ ಕೌನ್ಸಿಲ್ ಅಧಿನಿಯಮದ 13ನೇ ಪ್ರಕರಣದಡಿ ಪಡೆದ ನಂತರವೇ ನಿಗಧಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೆ ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
5. ಭಾರತೀಯ ಶುಶ್ರೂಷಾ ಪರಿಷತ್ತು, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ರಾಜ್ಯ ಸರ್ಕಾರ ಕಾಲಕಾಲಕ್ಕೆ ನೀಡುವ ಸೂಚನೆ ಹಾಗು ಆದೇಶಗಳನ್ನು ಪಾಲಿಸತಕ್ಕದ್ದು.
6. ಭಾರತೀಯ ಶುಶ್ರೂಷಾ ಪರಿಷತ್ತಿನ ಮಾರ್ಗಸೂಚಿ ಪ್ರಕಾರ ಸ್ವಂತ ಆಸ್ಪತ್ರೆಯನ್ನು 5 ವರ್ಷಗಳ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.
7. ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್, ಫಾರ್ಮಸಿ ಮತ್ತು ಫಿಜಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲ ಕಾಲಕ್ಕೆ ಎಂ.ಎಸ್ಸಿ., ನರ್ಸಿಂಗ್, ಎಂ.ಪಿ.ಟಿ ಮತ್ತು ಎಂ.ಫಾರ್ಮಾ ಕೋರ್ಸುಗಳ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ದಿಷ್ಟ ಅನುಪಾತದಲ್ಲಿ ಪ್ರತಿಬಂಧಿಸುವ ಪ್ರಕಾರವೇ ಮಾಡತಕ್ಕದ್ದು.
8. ಮೇಲ್ಕಂಡ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಕಾಲೇಜಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.

H R Mythreyee

9. ಮೇಲ್ಕಂಡ ಯಾವುದೇ ಷರತ್ತನ್ನು ಕಾಲೇಜು ಉಲ್ಲಂಘಿಸಿದಲ್ಲಿ 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 48ನೇ ಪ್ರಕರಣದಲ್ಲಿ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ವಿ. ಶ್ರೀರಾಮರೆಡ್ಡಿ 10/5/2000
(ವಿ.ಶ್ರೀರಾಮರೆಡ್ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)
10/05/11

ಇವರಿಗೆ:

1. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4ನೇ ಟಿ ಬ್ಲಾಕ್, ಬೆಂಗಳೂರು-560041.
2. ರಿಜಿಸ್ಟ್ರಾರ್, ಭಾರತೀಯ ನರ್ಸಿಂಗ್ ಪರಿಷತ್ತು, ಕೋಟ್ಲಾ ರಸ್ತೆ, ನವದೆಹಲಿ-110001.
3. ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು.
4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು.
5. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ನರ್ಸಿಂಗ್ ಕೌನ್ಸಿಲ್, ಸೂರ್ಯ ಅಪಾರ್ಟ್‌ಮೆಂಟ್ಸ್, ಗಾಂಧಿನಗರ, ಬೆಂಗಳೂರು-560009.
6. ಪ್ರಾಂಶುಪಾಲರು, ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರೀಸರ್ಚ್ ಸೆಂಟರ್, ತುಮಕೂರು
7. ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ವಿಧಾನ ಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

H Roopthiya
PRINCIPAL
Shree Siddaganga Institute of
Nursing Sciences & Research Centre
TUMKUR - 572 102

MSc (N)

M.Sc (N)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಮತ್ತು ರಿಸರ್ಚ್ ಸೆಂಟರ್ ತುಮಕೂರು ಇದರ ಎಂ.ಎಸ್ಸಿ. ನರ್ಸಿಂಗ್ ಕೋರ್ಸುಗಳಿಗೆ ಸಂಯೋಜನೆ ನೀಡುವ ಕುರಿತು.

ಓದಲಾಗಿದೆ:

ದಿನಾಂಕ 28-09-2006 ಸಂಖ್ಯೆ:ಎಸಿಎ/ಎಸ್‌ಎಸ್-50/2006-07ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪತ್ರ.

ಪ್ರಸ್ತಾವನೆ:

1) ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಮತ್ತು ರಿಸರ್ಚ್ ಸೆಂಟರ್ ತುಮಕೂರು ಇವರು ಎಂ.ಎಸ್ಸಿ. ನರ್ಸಿಂಗ್ ಇನ್ ಕಮ್ಯುನಿಟಿ ಹೆಲ್ತ್ ಹಾಗೂ ಸರ್ಜಿಕಲ್ ಕೋರ್ಸ್‌ಗಳ ಸಂಯೋಜನೆಗಾಗಿ 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 45ನೇ ಪ್ರಕರಣದಡಿ ಅರ್ಜಿಯನ್ನು ಸಲ್ಲಿಸಿತ್ತು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಕಾಲೇಜಿನ ಪರಿವೀಕ್ಷಣೆಯನ್ನು ನಡೆಸಿದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಶೈಕ್ಷಣಿಕ ಪರಿಷತ್ತಿನ ಸಮಾಲೋಚನೆಯೊಂದಿಗೆ ಸಿಂಡಿಕೇಟ್ ಸಭೆಯಲ್ಲಿ ವಿಶ್ಲೇಷಿಸಿ, 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 45(5)ನೇ ಪ್ರಕರಣದಡಿ ಅರ್ಜಿಯನ್ನು ಇತರೆ ದಾಖಲೆಗಳೊಂದಿಗೆ ಮೇಲೆ ಓದಲಾದ ಪತ್ರದನ್ವಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್‌ನ ನಿರ್ಣಯದ ಬೆಳಕಿನಲ್ಲಿ ಮೇಲ್ಕಂಡ ಎಂ.ಎಸ್ಸಿ ನರ್ಸಿಂಗ್ ಕೋರ್ಸಿಗೆ ಸಂಯೋಜನೆ ನೀಡುವುದನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 480 ಎಂಪಿಎಸ್ 2006, ಬೆಂಗಳೂರು, ದಿನಾಂಕ 28-05-2007**

2) 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 45(5)ನೇ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಮತ್ತು ರಿಸರ್ಚ್ ಸೆಂಟರ್, ತುಮಕೂರು ಇದರ ಎಂ.ಎಸ್ಸಿ. ನರ್ಸಿಂಗ್ ಇನ್ ಕಮ್ಯುನಿಟಿ ಹೆಲ್ತ್, ಹಾಗೂ ಮೆಡಿಕಲ್ ಸರ್ಜಿಕಲ್ ಕೋರ್ಸಿಗೆ ತಲಾ 5 (ಐದು) ಸೀಟುಗಳ ಪ್ರವೇಶ ಮಿತಿಯೊಂದಿಗೆ ಸರ್ಕಾರಕ್ಕೆ ಶೇ.50ರಷ್ಟು ಸೀಟುಗಳನ್ನು ಅಧ್ಯರ್ಪಿಸುವ ಷರತ್ತಿಗೊಳಪಟ್ಟು ಹಾಗೂ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆಗೊಳಪಡಿಸಿ 2007-08ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಲಾಗಿದೆ.

ಷರತ್ತುಗಳು

(1) ಮೇಲ್ಕಂಡ ಎಂ.ಎಸ್ಸಿ. ನರ್ಸಿಂಗ್ ಕೋರ್ಸ್‌ಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.

(2) 1947ರ ಭಾರತೀಯ ನರ್ಸಿಂಗ್ ಕೌನ್ಸಿಲ್ ಅಧಿನಿಯಮದ 13ನೇ ಪ್ರಕರಣದಲ್ಲಿ ಭಾರತೀಯ ಶುಶ್ರೂಷ ಪರಿಷತ್ತಿನ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಭಾರತೀಯ ನರ್ಸಿಂಗ್‌ಪರಿಷತ್ತು ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು ಮತ್ತು ಭಾರತೀಯ ಶುಶ್ರೂಷ ಪರಿಷತ್ತು ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದತಕ್ಕದ್ದು.

(3) ಭಾರತೀಯ ಶುಶ್ರೂಷ ಪರಿಷತ್ತಿನ ಅನುಮೋದನೆಯನ್ನು 1947ರ ಭಾರತೀಯ ನರ್ಸಿಂಗ್ ಕೌನ್ಸಿಲ್‌ನ ಅಧಿನಿಯಮದ 13ನೇ ಪ್ರಕರಣದಡಿ ಪಡೆದ ನಂತರವೇ ನಿಗದಿಪಡಿಸಿರುವ ವಿದ್ಯಾರ್ಥಿ ಪ್ರವೇಶ ಮಿತಿಯಂತೆ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991ರ ಕರ್ನಾಟಕ ಕ್ಯಾಪಿಟೇಷನ್ ರಹಿತ ಮತ್ತು ಅನಿಯಂತ್ರಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

(4) ಭಾರತೀಯ ಶುಶ್ರೂಷ ಪರಿಷತ್ತಿನ ಮಾರ್ಗಸೂಚಿ ಪ್ರಕಾರ ಸ್ವಂತ ಆಸ್ಪತ್ರೆಯನ್ನು 5 ವರ್ಷಗಳ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

(5) ಭಾರತೀಯ ಶುಶ್ರೂಷ ಪರಿಷತ್ತು, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು ಮತ್ತು ರಾಜ್ಯ ಸರ್ಕಾರ ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.

(6) ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್ ಫಾರ್ಮಸಿ ಮತ್ತು ಫಿಸಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಬಿ.ಎಸ್ಸಿ ನರ್ಸಿಂಗ್, ಬಿ.ಪಿ.ಟಿ. ಮತ್ತು ಬಿ.ಫಾರ್ಮ್ ಕೋರ್ಸುಗಳ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ಧಿಷ್ಟ ಅನುಪಾತದಲ್ಲಿ ಪ್ರತಿಬಂಧಿಸುವ ಪ್ರಕಾರವೇ ಮಾಡತಕ್ಕದ್ದು.

(7) ಮೇಲ್ಕಂಡ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ, ಇದು ಶಾಶ್ವತ ಅನುದಾನ ರಹಿತ ಕಾಲೇಜಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.

(8) ಮೇಲ್ಕಂಡ ಯಾವುದೇ ಷರತ್ತುಗಳನ್ನು ಕಾಲೇಜು ಉಲ್ಲಂಘಿಸಿದ್ದಲ್ಲಿ 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 48ನೇ ಪ್ರಕರಣದಡಿ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

([illegible] ಅಹಮದ್ ಷರೀಫ್)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ವೈದ್ಯಕೀಯ ಶಿಕ್ಷಣ)

ಪ್ರತಿ:

1) ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4ನೇ ಟಿ ಬ್ಲಾಕ್, ಬೆಂಗಳೂರು-41
2) ರಿಜಿಸ್ಟ್ರಾರ್, ಭಾರತೀಯ ನರ್ಸಿಂಗ್ ಪರಿಷತ್ತು, ಕೋಟ್ಲಾ ರಸ್ತೆ, ನವದೆಹಲಿ-110001.
3) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-09.
4) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-09.
5) ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
6) ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು, ಬೆಂಗಳೂರು-560 009.
7) [illegible], ಶ್ರೀ ಸಿದ್ಧಗಂಗಾ ಇನ್ಸ್‌ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಮತ್ತು ರಿಸರ್ಚ್ ಸೆಂಟರ್, ಬಿ.ಹೆಚ್. ರಸ್ತೆ, ತುಮಕೂರು-572 102
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

PRINCIPAL
Shree Siddaganga Institute of
Nursing Sciences & Research Centre
TUMKUR - 572 102

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು ಇವರಿಗೆ ಎಂ.ಎಸ್ಸಿ. ನರ್ಸಿಂಗ್ ಕೋರ್ಸ್‌ಗೆ ಸಂಯೋಜನೆ.

**ಓದಲಾಗಿದೆ:**

ಪತ್ರ ಸಂಖ್ಯೆ: ಎಸಿಎ/ಎನ್‌ಎಸ್-50/2007-08ರ ದಿನಾಂಕ 31-08-2007

**ಪ್ರಸ್ತಾವನೆ:**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಮೇಲೆ ಓದಲಾದ ತಮ್ಮ ಪತ್ರದಲ್ಲಿ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು ಇದು 2007-08ನೇ ಸಾಲಿನಲ್ಲಿ ಎಂ.ಎಸ್ಸಿ. ನರ್ಸಿಂಗ್ ಇನ್ ಓಬಿಜಿ ಮತ್ತು ಪೀಡಿಯಾಟ್ರಿಕ್ ನರ್ಸಿಂಗ್ ಕೋರ್ಸುಗಳಿಗೆ ತಲಾ 5 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಸಂಯೋಜನೆಗಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 45(2)ರಡಿ ಸಲ್ಲಿಸಿದ್ದ ಅರ್ಜಿಯನ್ನು, ಸ್ಥಳೀಯ ತಪಾಸಣಾ ಸಮಿತಿಯ ವರದಿಯನ್ನು ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ನಿರ್ಣಯವನ್ನು ಸಲ್ಲಿಸುತ್ತ, ಸಂಯೋಜನೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು ಇದಕ್ಕೆ 2007-08ನೇ ಸಾಲಿನಿಂದ ಎಂ.ಎಸ್ಸಿ. ನರ್ಸಿಂಗ್ ಇನ್ ಓಬಿಜಿ ಮತ್ತು ಪೀಡಿಯಾಟ್ರಿಕ್ ನರ್ಸಿಂಗ್ ಕೋರ್ಸುಗಳಿಗೆ ತಲಾ 5 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಸಂಯೋಜನೆಯನ್ನು ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 432 ಎಂಪಿಎಸ್ 2008,**
**ಬೆಂಗಳೂರು, ದಿನಾಂಕ 30-06-2008**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 45(5)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು ಇದಕ್ಕೆ 2007-08ನೇ ಸಾಲಿನಿಂದ ಎಂ.ಎಸ್ಸಿ. ನರ್ಸಿಂಗ್ ಇನ್ ಓಬಿಜಿ ಮತ್ತು ಪೀಡಿಯಾಟ್ರಿಕ್ ನರ್ಸಿಂಗ್ ಕೋರ್ಸುಗಳಿಗೆ ತಲಾ 5(ಐದು) ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗಳಿಗೊಳಪಟ್ಟು ಸಂಯೋಜನೆ ನೀಡಲು ಸರ್ಕಾರವು ಶಿಫಾರಸ್ಸು ಮಾಡಿದೆ.

**ಷರತ್ತುಗಳು ಮತ್ತು ನಿಬಂಧನೆಗಳು**

(1) ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು ಇದು ಶೇ.25ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.

(2) ಮೇಲ್ಕಂಡ ಎಂ.ಎಸ್ಸಿ. ನರ್ಸಿಂಗ್ ಕೋರ್ಸ್‌ಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.

[illegible] ಭಾರತೀಯ ನರ್ಸಿಂಗ್ ಕೌನ್ಸಿಲ್ ಅಧಿನಿಯಮದ 13ನೇ ಪ್ರಕರಣದಲ್ಲಿ ಭಾರತೀಯ ಶುಶ್ರೂಷಾ ಪರಿಷತ್ತಿನ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಭಾರತೀಯ ನರ್ಸಿಂಗ್ ಪರಿಷತ್ತು ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

[illegible] ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ಭಾರತೀಯ ಶುಶ್ರೂಷಾ ಪರಿಷತ್ತು ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

TUMKUR.

PRINCIPAL
Shree Siddaganga Institute of
Nursing Sciences & Research Centre
TUMKUR - 572 102

(4) ಭಾರತೀಯ ಶುಶ್ರೂಷಾ ಪರಿಷತ್ತಿನ ಅನುಮೋದನೆಯನ್ನು 1947ರ ಭಾರತೀಯ ಶುಶ್ರೂಷಾ ಕೌನ್ಸಿಲ್ ಅಧಿನಿಯಮದ 13ನೇ ಪ್ರಕರಣದಡಿ ಪಡೆದ ನಂತರವೇ ನಿಗದಿಪಡಿಸಿರುವ ವಿದ್ಯಾರ್ಥಿಗಳ ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೆ ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

(5) ಭಾರತೀಯ ಶುಶ್ರೂಷಾ ಪರಿಷತ್ತು, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ರಾಜ್ಯ ಸರ್ಕಾರ ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.

(6) ಭಾರತೀಯ ಶುಶ್ರೂಷಾ ಪರಿಷತ್ತಿನ ಮಾರ್ಗಸೂಚಿ ಪ್ರಕಾರ ಸ್ವಂತ ಆಸ್ಪತ್ರೆಯನ್ನು 5 ವರ್ಷಗಳ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

(7) ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್, ಫಾರ್ಮಸಿ ಮತ್ತು ಫಿಸಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಎಂ.ಎಸ್ಸಿ. ನರ್ಸಿಂಗ್, ಎಂ.ಪಿ.ಟಿ. ಮತ್ತು ಎಂ.ಫಾರ್ಮ ಕೋರ್ಸುಗಳ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ದಿಷ್ಟ ಅನುಪಾತದಲ್ಲಿ ಪ್ರತಿಬಂಧಿಸುವ ಪ್ರಕಾರವೇ ಮಾಡತಕ್ಕದ್ದು.

(8) ಮೇಲ್ಕಂಡ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಕಾಲೇಜಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.

(9) ಮೇಲ್ಕಂಡ ಯಾವುದೇ ಷರತ್ತನ್ನು ಕಾಲೇಜು ಉಲ್ಲಂಘಿಸಿದ್ದಲ್ಲಿ 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 48ನೇ ಪ್ರಕರಣದಡಿ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ವಿ. ಶ್ರೀರಾಮರೆಡ್ಡಿ 30/6/2008
(ವಿ. ಶ್ರೀರಾಮರೆಡ್ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ವೈದ್ಯಕೀಯ ಶಿಕ್ಷಣ)

<u>ಇವರಿಗೆ:</u>

1) ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4ನೇ ಟಿ ಬ್ಲಾಕ್, ಬೆಂಗಳೂರು-41.
2) ರಿಜಿಸ್ಟ್ರಾರ್, ಭಾರತೀಯ ಶುಶ್ರೂಷಾ ಪರಿಷತ್ತು, ಕೋಟ್ಲಾ ರಸ್ತೆ, ನವದೆಹಲಿ-110001.
3) ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ತು, ಬೆಂಗಳೂರು-560 009.
4) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-09.
5) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-560 009.
6) ಪ್ರಾಂಶುಪಾಲರು, ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು
7) ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
8) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ವಿಧಾನಸೌಧ.
9) ಸರ್ಕಾರದ ಅಪರ ಕಾರ್ಯದರ್ಶಿರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

PRINCIPAL
Sree Siddaganga Institute of
Nursing Sciences & Research Centre
TUMKUR - 572 102

Shree Siddaganga Institute of Nursing Sciences & Research Centre * TUMKUR *
No. 52/2008-09
Date 17-07-08

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರಿಸರ್ಚ್ ಸೆಂಟರ್, ತುಮಕೂರು ಇವರಿಗೆ ಎಂ.ಎಸ್ಸಿ. ನರ್ಸಿಂಗ್ ಕೋರ್ಸ್‌ಗೆ ಸಂಯೋಜನೆ.

ಓದಲಾಗಿದೆ:

ಪತ್ರ ಸಂಖ್ಯೆ:ಎಸಿಎ/ಎಸ್‌ಎಸ್-50/2007-08, ದಿನಾಂಕ 25-3-2008.

ಪ್ರಸ್ತಾವನೆ:

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಮೇಲೆ ಓದಲಾದ ತಮ್ಮ ಪತ್ರದಲ್ಲಿ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರಿಸರ್ಚ್ ಸೆಂಟರ್, ತುಮಕೂರು ಇದು 2007-08ನೇ ಸಾಲಿನಲ್ಲಿ ಎಂ.ಎಸ್ಸಿ. ನರ್ಸಿಂಗ್ ಇನ್ ಸೈಕಿಯಾಟ್ರಿ ನರ್ಸಿಂಗ್ ಕೋರ್ಸಿನ 5 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಸಂಯೋಜನೆಗಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 45(2)ರಡಿ ಸಲ್ಲಿಸಿದ್ದ ಅರ್ಜಿಯನ್ನು, ಸ್ಥಳೀಯ ತಪಾಸಣಾ ಸಮಿತಿಯ ವರದಿಯನ್ನು ಅಕಾಡೆಮಿಕ್ ಕೌನ್ಸಿಲ್ ಮತ್ತು ಸಿಂಡಿಕೇಟ್ ನಿರ್ಣಯವನ್ನು ಸಲ್ಲಿಸುತ್ತ, ಸಂಯೋಜನೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರಿಸರ್ಚ್ ಸೆಂಟರ್, ತುಮಕೂರು ಇದಕ್ಕೆ 2007-08ನೇ ಸಾಲಿನಿಂದ ಎಂ.ಎಸ್ಸಿ. ನರ್ಸಿಂಗ್ ಇನ್ ಸೈಕಿಯಾಟ್ರಿ ನರ್ಸಿಂಗ್ ಕೋರ್ಸಿನ 5 ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಸಂಯೋಜನೆಯನ್ನು ನೀಡಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 168 ಎಂಪಿಎಸ್ 2008, ಬೆಂಗಳೂರು, ದಿನಾಂಕ 28-6-2008**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ 1994ರ ಕಲಂ 45(5)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರಿಸರ್ಚ್ ಸೆಂಟರ್, ತುಮಕೂರು ಇದಕ್ಕೆ 2007-08ನೇ ಸಾಲಿನಿಂದ ಎಂ.ಎಸ್ಸಿ. ನರ್ಸಿಂಗ್ ಇನ್ ಸೈಕಿಯಾಟ್ರಿ ನರ್ಸಿಂಗ್ ಕೋರ್ಸಿನ 5 (ಐದು) ಸೀಟುಗಳ ಪ್ರವೇಶ ಮಿತಿಯೊಂದಿಗೆ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳು ಮತ್ತು ನಿಬಂಧನೆಗಳಿಗೊಳಪಟ್ಟು ಸಂಯೋಜನೆ ನೀಡಲು ಸರ್ಕಾರವು ಶಿಫಾರಸ್ಸು ಮಾಡಿದೆ.

### ಷರತ್ತುಗಳು ಮತ್ತು ನಿಬಂಧನೆಗಳು

(1) ಸಿದ್ಧಗಂಗಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್ ಅಂಡ್ ರಿಸರ್ಚ್ ಸೆಂಟರ್, ತುಮಕೂರು ಇದು ಶೇ.25ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.

(2) ಮೇಲ್ಕಂಡ ಕೋರ್ಸ್‌ಗಳ ಸಂಯೋಜನೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮಂಜೂರಾತಿಯನ್ನು ಪಡೆಯತಕ್ಕದ್ದು.

(3) 1947ರ ಭಾರತೀಯ ನರ್ಸಿಂಗ್ ಕೌನ್ಸಿಲ್ ಅಧಿನಿಯಮದ 13ನೇ ಪ್ರಕರಣದಲ್ಲಿ ಭಾರತೀಯ ಶುಶ್ರೂಷಾ ಪರಿಷತ್ತಿನ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಭಾರತೀಯ ನರ್ಸಿಂಗ್ ಪರಿಷತ್ತು ನಿಗದಿಪಡಿಸಿರುವ ಪರಿನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ಭಾರತೀಯ ಶುಶ್ರೂಷಾ ಪರಿಷತ್ತು ನಿಗದಿಪಡಿಸಿರುವ ಮೂಲಭೂತ ಸೌಲಭ್ಯಗಳನ್ನು ಹೊಂದತಕ್ಕದ್ದು.

(4) ಭಾರತೀಯ ಶುಶ್ರೂಷಾ ಪರಿಷತ್ತಿನ ಅನುಮೋದನೆಯನ್ನು 1947ರ ಭಾರತೀಯ ನರ್ಸಿಂಗ್ ಕೌನ್ಸಿಲ್ ಅಧಿನಿಯಮದ 13ನೇ ಪ್ರಕರಣದಡಿ ಪಡೆದ ನಂತರವೇ ನಿಗದಿಪಡಿಸಿರುವ ವಿದ್ಯಾರ್ಥಿಗಳ

17/7/08

17/07/08

PRINCIPAL
Shree Siddaganga Institute of Nursing Sciences & Research Centre
TUMKUR - 572 102

ಪ್ರವೇಶ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೆ ಹೆಚ್ಚುವರಿ ವಿದ್ಯಾರ್ಥಿ ಪ್ರವೇಶ ಪಡೆಯತಕ್ಕದ್ದಲ್ಲ. ಇದನ್ನು ಉಲ್ಲಂಘಿಸಿದ್ದಲ್ಲಿ 1991ರ ಕರ್ನಾಟಕ ಮಾನ್ಯತೆ ರಹಿತ ಮತ್ತು ಅಸಂಯೋಜಿತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ, ಅಧಿನಿಯಮದಡಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

(5) ಭಾರತೀಯ ಶುಶ್ರೂಷಾ ಪರಿಷತ್ತು, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು ಮತ್ತು ರಾಜ್ಯ ಸರ್ಕಾರ ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.

(6) ಭಾರತೀಯ ಶುಶ್ರೂಷಾ ಪರಿಷತ್ತಿನ ಮಾರ್ಗಸೂಚಿ ಪ್ರಕಾರ ಸ್ವಂತ ಆಸ್ಪತ್ರೆಯನ್ನು 5 ವರ್ಷಗಳ ಕಾಲಮಿತಿಯಲ್ಲಿ ಹೊಂದತಕ್ಕದ್ದು. ತಪ್ಪಿದಲ್ಲಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

(7) ವಿದ್ಯಾರ್ಥಿಗಳ ಪ್ರವೇಶವನ್ನು 2003ರ ಕರ್ನಾಟಕ ನರ್ಸಿಂಗ್, ಫಾರ್ಮಸಿ ಮತ್ತು ಫಿಸಿಯೋಥೆರಪಿ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಕೋರ್ಸುಗಳ ಪ್ರವೇಶಕ್ಕೆ ಅಭ್ಯರ್ಥಿಗಳ ಆಯ್ಕೆ ನಿಯಮಾವಳಿ ಹಾಗೂ ಸರ್ಕಾರವು ಕಾಲಕಾಲಕ್ಕೆ ಎಂ.ಎಸ್ಸಿ. ನರ್ಸಿಂಗ್, ಎಂ.ಪಿ.ಟಿ. ಮತ್ತು ಎಂ.ಫಾರ್ಮ ಕೋರ್ಸುಗಳ ಪ್ರವೇಶಕ್ಕೆ ಸರ್ಕಾರಿ ಕೋಟಾದ ಮತ್ತು ಮ್ಯಾನೇಜ್‌ಮೆಂಟ್ ಕೋಟಾದ ನಿರ್ದಿಷ್ಟ ಅನುಪಾತದಲ್ಲಿ ಪ್ರತಿಬಂಧಿಸುವ ಪ್ರಕಾರವೇ ಮಾಡತಕ್ಕದ್ದು.

(8) ಮೇಲ್ಕಂಡ ಕಾಲೇಜಿಗೆ ಕರ್ನಾಟಕ ಸರ್ಕಾರದ ವತಿಯಿಂದ ಯಾವುದೇ ರೀತಿಯ ಅನುದಾನ, ಆರ್ಥಿಕ ಸೌಲಭ್ಯಗಳನ್ನು ನೀಡಲಾಗುವುದಿಲ್ಲ. ಇದು ಶಾಶ್ವತ ಅನುದಾನ ರಹಿತ ಕಾಲೇಜಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.

(9) ಮೇಲ್ಕಂಡ ಯಾವುದೇ ಷರತ್ತನ್ನು ಕಾಲೇಜು ಉಲ್ಲಂಘಿಸಿದ್ದಲ್ಲಿ 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮದ 48ನೇ ಪ್ರಕರಣದಡಿ ಸಂಯೋಜನೆಯನ್ನು ಹಿಂತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಶ್ರೀರಾಮರೆಡ್ಡಿ) 20/6/2008
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ವೈದ್ಯಕೀಯ ಶಿಕ್ಷಣ)

ಪ್ರತಿಗೆ:

1) ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4ನೇ ಟಿ ಬ್ಲಾಕ್, ಬೆಂಗಳೂರು-41.
2) ರಿಜಿಸ್ಟ್ರಾರ್, ಭಾರತೀಯ ಶುಶ್ರೂಷಾ ಪರಿಷತ್ತು, ಕೋಟ್ಲಾ ರಸ್ತೆ, ನವದೆಹಲಿ-110001.
3) ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಶುಶ್ರೂಷಾ ಪರಿಷತ್ತು, ಬೆಂಗಳೂರು-560 009.
4) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು-09.
5) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು, ಆನಂದರಾವ್ ವೃತ್ತ, ಬೆಂ[illegible]- 560 009.
6) ಪ್ರಾಂಶುಪಾಲರು, ಸಿದ್ಧಗಂಗಾ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಅಂಡ್ ರಿಸ[illegible] ಸೆಂಟರ್, ತುಮಕೂರು
7) ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
8) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ವಿಧಾನಸೌಧ.
9) ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನಸೌಧ.
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

H R Mythyle
PRINCIPAL
Shree Siddaganga Institute of
Nursing Sciences & Research Centre
TUMKUR - 572 102

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸರ್ಕಾರದ ವಿವಿಧ ಆದೇಶಗಳಲ್ಲಿ ಸಂಯೋಜನೆ ನೀಡಲಾದ ನರ್ಸಿಂಗ್ ಶಾಲೆಗಳ ಪ್ರವೇಶಮಿತಿಯನ್ನು ಇಳಿಕೆ ಮಾಡಿ, ಸಂಯೋಜನೆ ನೀಡುವ ಬಗ್ಗೆ.

**ಓದಲಾಗಿದೆ:**

(1) ಸರ್ಕಾರ ಆದೇಶ ಸಂಖ್ಯೆ: ಆಕುಕ 276 (ಎ) ಎಂಎಂಇ 2002, ದಿ: 05.09.2022.

(2) ಸರ್ಕಾರ ಆದೇಶ ಸಂಖ್ಯೆ: ಆಕುಕ 276 ಎಂಎಂಇ 2002, ದಿನಾಂಕ: 16.09.2002.

(3) ಸರ್ಕಾರ ಆದೇಶ ಸಂಖ್ಯೆ: ಆಕುಕ 29 ಎಂಎಂಇ 2003, ದಿನಾಂಕ: 04.08.2003.

(4) ಸರ್ಕಾರ ಆದೇಶ ಸಂಖ್ಯೆ: ಆಕುಕ 368 ಎಂಎಂಇ 2003, ದಿನಾಂಕ: 12.12.2003.

(5) ಸರ್ಕಾರದ ಆದೇಶ ಸಂಖ್ಯೆ: 260 ಆರ್‌ಜಿಯು 2024, ದಿನಾಂಕ: 10.12.2024.

(6) ಸರ್ಕಾರದ ಆದೇಶ ಸಂಖ್ಯೆ: 599 ಆರ್‌ಜಿಯು 2024, ದಿನಾಂಕ: 10.12.2024.

(7) ಸರ್ಕಾರದ ಆದೇಶ ಸಂಖ್ಯೆ: 598 ಆರ್‌ಜಿಯು 2024, ದಿನಾಂಕ: 10.12.2024.

(8) ಸರ್ಕಾರದ ಆದೇಶ ಸಂಖ್ಯೆ: 267 ಆರ್‌ಜಿಯು 2024, ದಿನಾಂಕ: 10.12.2024.

(9) ಕಾರ್ಯದರ್ಶಿ, ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಇವರ ಅಧಿಸೂಚನೆ ಸಂಖ್ಯೆ: 16 of 2024/F.NO.1-6/LT.2024-INC, ದಿನಾಂಕ: 27.12.2024.

(10) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರ ಏಕಕಡತ ಸಂಖ್ಯೆ: 1898170.

* * * * *

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ, ಡಾ: ಬಿ.ಆರ್. ಅಂಬೇಡ್ಕರ್ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ಬೆಂಗಳೂರು, ಚಾಲನೆಯಲ್ಲಿದ್ದ ಈ ಸಂಸ್ಥೆಗೆ ಜಿ.ಎನ್.ಎಂ. ಪ್ರವೇಶಮಿತಿಯನ್ನು 2002-03ನೇ ಸಾಲಿನಿಂದ ಜಾರಿಗೆ ಬರುವಂತೆ 60 (ಅರವತ್ತು) ರಿಂದ 70 (ಎಪ್ಪತ್ತು)ಕ್ಕೆ ಹೆಚ್ಚಿಸಿ, ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ, ಶ್ರೀ ಸಿದ್ಧಗಂಗ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು, ಚಾಲನೆಯಲ್ಲಿದ್ದ ಈ ಸಂಸ್ಥೆಗೆ ಜಿ.ಎನ್.ಎಂ. ಪ್ರವೇಶಮಿತಿಯನ್ನು 60 ರಿಂದ 90ಕ್ಕೆ ಹೆಚ್ಚಿಸಿ, ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರದ ಆದೇಶದಲ್ಲಿ, ತುಮಕೂರಿನ ಶ್ರೀದೇವಿ ನರ್ಸಿಂಗ್ ಶಾಲೆ, ಚಾಲನೆಯಲ್ಲಿದ್ದ ಈ ಸಂಸ್ಥೆಗೆ ಡಿಪ್ಲೋಮಾ ಕೋರ್ಸಿನ ಪ್ರವೇಶಮಿತಿಯನ್ನು 2002-03ನೇ ಸಾಲಿನಿಂದ 120 ರಿಂದ 150ಕ್ಕೆ ಹೆಚ್ಚಿಸಿ, ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರದ ಆದೇಶದಲ್ಲಿ, ಬೆಂಗಳೂರಿನ ಈಸ್ಟ್ ಪಾಯಿಂಟ್ ನರ್ಸಿಂಗ್ ಈ ಸಂಸ್ಥೆಗೆ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸಿನ ಪ್ರವೇಶಮಿತಿಯನ್ನು

PRINCIPAL
Shree Siddaganga Institute of
Nursing Sciences & Research Centre
TUMKUR - 572 102

2003-04ನೇ ಸಾಲಿನಿಂದ 60 ಸೀಟುಗಳ ಪ್ರವೇಶಮಿತಿಯೊಂದಿಗೆ ಪ್ರಾರಂಭಿಸಲು ಮಂಜೂರಾತಿ ನೀಡಿ, ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಸರ್ಕಾರದ ಆದೇಶದಲ್ಲಿ Dr. B R Ambedkar Institute of Nursing, Bengaluru ಈ ಕಾಲೇಜಿನಲ್ಲಿ 2024-25ನೇ ಸಾಲಿನಿಂದ ಬಿ.ಎಸ್ಸಿ. ನರ್ಸಿಂಗ್ ಕೋರ್ಸಿನ ಪ್ರವೇಶಮಿತಿಯನ್ನು 100 ರಿಂದ 250 ಸೀಟುಗಳಿಗೆ ಹೆಚ್ಚಿಸಿ ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಸರ್ಕಾರದ ಆದೇಶದಲ್ಲಿ, ಶ್ರೀ ಸಿದ್ಧಗಂಗಾ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು ಈ ಕಾಲೇಜಿನಲ್ಲಿ 2024-25ನೇ ಸಾಲಿನಿಂದ ಬಿ.ಎಸ್ಸಿ. ನರ್ಸಿಂಗ್ ಕೋರ್ಸಿನ ಪ್ರವೇಶಮಿತಿಯನ್ನು 60 ರಿಂದ 250 ಸೀಟುಗಳಿಗೆ ಹೆಚ್ಚಿಸಿ ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಸರ್ಕಾರದ ಆದೇಶದಲ್ಲಿ, ತುಮಕೂರಿನ ಶ್ರೀದೇವಿ ಸ್ಕೂಲ್ ಆಫ್ ನರ್ಸಿಂಗ್, ತುಮಕೂರು ಈ ಕಾಲೇಜಿನಲ್ಲಿ 2024-25ನೇ ಸಾಲಿನಿಂದ ಬಿ.ಎಸ್ಸಿ. ನರ್ಸಿಂಗ್ ಕೋರ್ಸಿನ ಪ್ರವೇಶಮಿತಿಯನ್ನು 100 ರಿಂದ 250 ಸೀಟುಗಳಿಗೆ ಹೆಚ್ಚಿಸಿ ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಸರ್ಕಾರದ ಆದೇಶದಲ್ಲಿ, ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ನರ್ಸಿಂಗ್, ಬೆಂಗಳೂರು ಈ ಕಾಲೇಜಿನಲ್ಲಿ 2024-25ನೇ ಸಾಲಿನಿಂದ ಬಿ.ಎಸ್ಸಿ. ನರ್ಸಿಂಗ್ ಕೋರ್ಸಿನ ಪ್ರವೇಶಮಿತಿಯನ್ನು 100 ರಿಂದ 250 ಸೀಟುಗಳಿಗೆ ಹೆಚ್ಚಿಸಿ ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಇವರ ಅಧಿಸೂಚನೆಯಲ್ಲಿ, ನರ್ಸಿಂಗ್ ಶಾಲೆಗಳು/ಕಾಲೇಜುಗಳು ಜಿ.ಎನ್.ಎಮ್. ಹಾಗೂ ಬಿ.ಎಸ್ಸಿ ನರ್ಸಿಂಗ್ ಈ ಎರಡೂ ಕೋರ್ಸುಗಳನ್ನು ಪ್ರಾರಂಭಿಸಲು ಪ್ರವೇಶ ಮಿತಿಯನ್ನು ಗರಿಷ್ಠ 300 ಸೀಟುಗಳಿಗೆ ಮಾತ್ರ ಸೀಮಿತಗೊಳಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (10)ರ ಏಕಕಡತದಲ್ಲಿ, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ಭಾರತೀಯ ಶುಶ್ರೂಷಾ ಪರಿಷತ್ತಿನವರ ಅಧಿಸೂಚನೆ ಸಂಖ್ಯೆ F.No.1-6/LT/2024-INC dt: 27-12-2024 ರನ್ವಯ ಡಾ: ಬಿ.ಆರ್. ಅಂಬೇಡ್ಕರ್ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ಬೆಂಗಳೂರು; ಶ್ರೀ ಸಿದ್ಧಗಂಗಾ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು; ಶ್ರೀದೇವಿ ಸ್ಕೂಲ್ ಆಫ್ ನರ್ಸಿಂಗ್, ತುಮಕೂರು ಮತ್ತು ಈಸ್ಟ್ ಪಾಯಿಂಟ್ ಸ್ಕೂಲ್ ಆಫ್ ನರ್ಸಿಂಗ್, ಬೆಂಗಳೂರು ಇವರು ಮನವಿಗಳನ್ನು ಸಲ್ಲಿಸಿ, ಭಾರತೀಯ ಶುಶ್ರೂಷಾ ಪರಿಷತ್ತಿನ ಹಾಗೂ ಸರ್ಕಾರದ ಆದೇಶದಂತೆ ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ನ್ನು ಉನ್ನತೀಕರಣಗೊಳಿಸಿಕೊಂಡು 250 ಸೀಟುಗಳಿಗೆ ಹೆಚ್ಚಿಸಿಕೊಂಡಿರುವ ಪ್ರವೇಶ ಮಿತಿ ಹಾಗೂ ಸರ್ಕಾರದ ಆದೇಶದಂತೆ ನಡೆಸುತ್ತಿರುವ ಜಿ.ಎನ್.ಎಮ್. ಪ್ರವೇಶ ಮಿತಿ 300 ಕ್ಕೂ ಅಧಿಕ (GNM & B.Sc (N) ) ಪ್ರವೇಶಾತಿಯನ್ನು ಮೀರಿರುವುದರಿಂದ, ಸದರಿ ಸಂಸ್ಥೆಯವರು 2025-26 ನೇ ಸಾಲಿನಿಂದ 50 ಸೀಟುಗಳ ಪ್ರವೇಶ ಮಿತಿಯೊಂದಿಗೆ ಜಿ.ಎನ್.ಎಮ್. ಕೋರ್ಸ್ ನಡೆಸಲು ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿದ್ದು, ಅದರಂತೆ, 2025-26ನೇ ಸಾಲಿನಿಂದ ಜಿ.ಎನ್.ಎಂ. ಕೋರ್ಸುಗಳ ಪ್ರವೇಶಾತಿಯನ್ನು 50 ಸೀಟುಗಳ ಮಿತಿಯೊಂದಿಗೆ ನಡೆಸಲು ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿ, (1) ಡಾ: ಬಿ.ಆರ್. ಅಂಬೇಡ್ಕರ್ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ಬೆಂಗಳೂರು; (2) ಶ್ರೀ ಸಿದ್ಧಗಂಗಾ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು; (3) ಶ್ರೀದೇವಿ ಸ್ಕೂಲ್ ಆಫ್ ನರ್ಸಿಂಗ್, ತುಮಕೂರು ಮತ್ತು (4) ಈಸ್ಟ್ ಪಾಯಿಂಟ್ ಸ್ಕೂಲ್ ಆಫ್ ನರ್ಸಿಂಗ್, ಬೆಂಗಳೂರು ಈ ಸಂಸ್ಥೆಗಳು 2025-26ನೇ ಸಾಲಿನಿಂದ ಜಿ.ಎನ್.ಎಂ. ಕೋರ್ಸುಗಳ ಪ್ರವೇಶಾಮಿತಿಯನ್ನು ಇಳಿಕೆಗೊಳಿಸಿ, 50 ಸೀಟುಗಳ ಮಿತಿಯೊಂದಿಗೆ ನಡೆಸಲು ಸಂಯೋಜನೆ ನೀಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಂಇಡಿ 172 ಆರ್ ಜಿ ಯು 2025, ಬೆಂಗಳೂರು,**
**ದಿನಾಂಕ:04.10.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಕೋಷ್ಟಕದಲ್ಲಿನ ಸಂಸ್ಥೆಗಳಲ್ಲಿ 2025-26ನೇ ಸಾಲಿನಿಂದ ಜಾರಿಗೆ ಬರುವಂತೆ ಜಿ.ಎನ್.ಎಂ. ಕೋರ್ಸುಗಳ ಪ್ರವೇಶಮಿತಿಯನ್ನು ಇಳಿಕೆಗೊಳಿಸಿ, 50 ಸೀಟುಗಳ ಪ್ರವೇಶಮಿತಿಯೊಂದಿಗೆ ನಡೆಸಲು ಈ ಮುಂದಿನ ಷರತ್ತಿಗೊಳಪಟ್ಟು ಸಂಯೋಜನ ನೀಡಿ, ಆದೇಶಿಸಿದೆ.

| ಕ್ರ. ಸಂಖ್ಯೆ | ಶಾಲೆಯ ಹೆಸರು | ಪ್ರಸ್ತುತ ಇರುವ ಜಿ.ಎನ್.ಎಮ್. ನರ್ಸಿಂಗ್ ಕೋರ್ಸ್ ಪ್ರವೇಶ ಮಿತಿ ಸಂಖ್ಯೆ | ಇಳಿಕೆಗೊಳಿಸಿ, ಸಂಯೋಜನೆ ನೀಡಿದ ಜಿ.ಎನ್.ಎಮ್. ನರ್ಸಿಂಗ್ ಕೋರ್ಸ್ ಪ್ರವೇಶ ಮಿತಿ ಸಂಖ್ಯೆ |
|---|---|---|---|
| 1 | Dr.B.R. Ambedkar Institute of Nursing, Bengaluru | 75 | 50 ಸೀಟುಗಳು |
| 2 | Shree Siddaganga Institute of Nursing, Tumkur | 90 | 50 ಸೀಟುಗಳು |
| 3 | Shridevi School of Nursing, Tumkur | 150 | 50 ಸೀಟುಗಳು |
| 4 | East Point School of Nursing, Bengaluru | 60 | 50 ಸೀಟುಗಳು |

**ಷರತ್ತು ಮತ್ತು ನಿಬಂಧನೆಗಳು**

1. ಸರ್ಕಾರದ ಆದೇಶ ಹೊರಡಿಸಿದ ನಂತರ ಅಂದರೆ, 2025-26ನೇ ಶೈಕ್ಷಣಿಕ ಸಾಲಿನಿಂದ ಈ ಪ್ರವೇಶಮಿತಿಯು ಅನ್ವಯವಾಗತಕ್ಕದ್ದು.
2. ಈ ಸಂಸ್ಥೆಯು ಮೇಲ್ಕಂಡ ಕೋರ್ಸ್‌ನ ಶೇ.10 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಹಂಚಿಕೆಗಾಗಿ ಬಿಟ್ಟುಕೊಡತಕ್ಕದ್ದು.
3. ಮೂಲ ಸಂಯೋಜನೆ ಮತ್ತು ಹೆಚ್ಚುವರಿ ಕೋರ್ಸಿನ ಸಂಯೋಜನೆ ನೀಡಿದ್ದ ಸಂದರ್ಭದಲ್ಲಿ ವಿಧಿಸಲಾಗಿದ್ದ ಷರತ್ತುಗಳು ಯಥಾವತ್ತಾಗಿ ಮುಂದುವರೆಯತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುತ್ತುರಾಜು ಎಂ.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-2,
ವೈದ್ಯಕೀಯ ಶಿಕ್ಷಣ ಇಲಾಖೆ,

H R [signature]
PRINCIPAL
Shree Siddaganga Institute of
Nursing Sciences & Research Centre
TUMKUR - 572 102

**ಇವರಿಗೆ:**

1. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್ ಜಯನಗರ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿಆರ್‌ಐ ಹಳೆ ಕಟ್ಟಡ, ಕೆ.ಆರ್ ರಸ್ತೆ, ಬೆಂಗಳೂರು.

3. ಪ್ರಾಂಶುಪಾಲರು/ಕಾರ್ಯದರ್ಶಿ/ಅಧ್ಯಕ್ಷರು, Dr B.R Ambedkar Institute of Nursing, No. 24, Kadugondanahalli, Dr B R Ambedkar Medical College Campus, Bengaluru- 560045.
4. ಪ್ರಾಂಶುಪಾಲರು/ಕಾರ್ಯದರ್ಶಿ/ಅಧ್ಯಕ್ಷರು, ಶ್ರೀದೇವಿ ಸ್ಕೂಲ್ ಆಫ್ ನರ್ಸಿಂಗ್, ತುಮಕೂರು.
5. ಪ್ರಾಂಶುಪಾಲರು/ಕಾರ್ಯದರ್ಶಿ/ಅಧ್ಯಕ್ಷರು, ಶ್ರೀ ಸಿದ್ದಗಂಗಾ ಇನ್ಸಿಟಿಟ್ಯೂಟ್ ಆಫ್ ನರ್ಸಿಂಗ್, ತುಮಕೂರು
6. ಪ್ರಾಂಶುಪಾಲರು/ಕಾರ್ಯದರ್ಶಿ/ಅಧ್ಯಕ್ಷರು, East Point School of Nursing, Jnana Prabha Campus, No. 147, Bidarahalli, Virgonagar (Post), Bengaluru-560049.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ವೈದ್ಯಕೀಯ ಶಿಕ್ಷಣ, ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.

PRINCIPAL
Shree Siddaganga Institute of
Nursing Sciences & Research Centre
TUMKUR - 572 102

# Proceedings of Karnataka Government

Sub: Shree Siddaganga Institute of Nursing Sciences and Research center, Tumkur. To increase addmission for BSc Nursing from 60 to 250 in this college.

Read: RGUHS/AFF/NSG/Enhancementr/B.Sc(N)/2024-25 regarding approval of the Chancellor, Rajiv Gandhi University of Health Sciences, Bangalore Date:28.11.2024

Preface:

in the letter read above, Chancellor, Rajiv Gandhi University of Health Sciences, Bangalore is Shree Siddaganga Education Society (R) of Shree Siddaganga Institute of Nursing Sciences and Research center, B.H.Road, Tumkur-572102 Rajiv Gandhi University of Health Sciences to increase the admission limit of B.Sc Nursing course from 60 seats to 250 seats from the year 2024-25 in this college. Article 45(2) of the University Act, 1994 has an application submitted by the institution, submitting the report of the Local Scrutiny Committee and the resolution of the Academic Council and Syndicate Committee recommending to the Government to allow the admission limit of the above course in this institution to be increased from 60 seats to 250 seats from the year 2024-25.

Scrutinize the proposal with relevant documents dated:05.12.2024 in a high powered committee meeting chaired by the Principal Secretary to Government, Department of Medical Education, as recommended by Sree Siddaganga Education Society (R) a Shree Siddaganga Institute of Nursing Sciences and Research Centre, B.H.Road, Tumkur-572102 Admission to B.Sc Nursing Course in this college from 2024-25 Govt decided to sanction increase from 60 (sixty) seats to 250 (two hundred and fifty) seats. Ordered as follows.

Government order number: MID 599 MMC2024
Bangalore, Dated:10/12/2024

Section 45(5) of the Rajiv Gandhi University of Health Sciences Act, 1994, Sree Siddaganga Education Society (R) Shree Siddaganga Institute of Nursing Sciences and Research Centre, B.H.Road, Tumkur-572102 limits the admission to this B,Sc Nursing course from 2024-25 to 60 (sixty) seats. It has been ordered to increase the number of seats to 250 (two hundred and fifty) subject to the following conditions.

**TERMS AND CONDITIONS**

1. After issuing the government order i.e. from the academic year 2024-25 students should be admitted to the seats where the admission limit has been increased.

2. This institution shall give up 20% seats of the above course to the Government for allotment.

3. Approval of Rajiv Gandhi University of Health Sciences should be obtained for combination of above courses.

4.The regulations prescribed by Rajiv Gandhi University of Health Sciences shall be strictly adhered to. The said Trust/Institution/Association requires building/basic as per INC/Rules for starting Nursing College.

M.SHAFIQ AHAMED B.A., LL.B. ADVOCATE & NOTARY TUMKURU Reg No: 311/17

Kannada to English Translated by Vidya

Regarding availability of facilities, the University shall ensure from the concerned authority.

5. The said institution shall admit the scheduled students only after approval of Rajiv Gandhi University of Health Sciences. No additional student should be admitted for any reason. Violation of this will result in criminal prosecution under the Karnataka Prohibition of Admission of Students to Unrecognized and Unaffiliated Educational Institutions Act, 1991.

6. Instructions and orders issued by the State Government and the University from time to time shall be compulsorily followed.

7. The said institution shall have its own hospital within the time frame prescribed by the Government. Failure to do so will result in withdrawal of affiliation from the college.

8. Admission of students shall be as per the selection rules of candidates for admission to Karnataka Nursing, Pharmacy and Physiotherapy Courses 2003 and the specific ratio of Government Quota and Management Quota for admission to the above course as prescribed by the Government from time to time.

9. No grant or financial facilities will be provided by the Government of Karnataka to the above institution. It is subject to the condition of being a permanent unaided institution.

10. The University shall ensure from the concerned authority that the trust organization/associations are in existence.

11. The University shall ensure from the concerned authority that the trust/institution/associations/etc are not bought/sold from any other person and that there is no change in the original trustees in violation of the rules.

12. The University shall ensure from the concerned authority that its own hospital has adequate clinical facilities and bed capacity as per norms for starting the said nursing college.

13. The University shall ensure that the teaching/non-teaching staff given to start the said Nursing College have Aadhaar link attendance so as not to be duplicated in any other institution.

14. The said Nursing College was established by I.N.C. And the concerned authority shall collect from the students the fee prescribed by the rules. If not, the concerned nursing college shall withdraw the affiliation and the University shall take legal action.

15. In case the said institution violates any of the above clauses, the affiliation currently granted to the said institution under section 48 of the Rajiv Gandhi University of Health Sciences Act, 1994 shall stand withdrawn.

16. Mandatory publication of the details of human resources in each organization on the website of the respective organizations, steps should be taken not to show the same staff in different organizations. In this regard, pay slip and Form-16 should be checked.

17. Geo-tagging of basic facilities,

18. The Site Inspection Committee and RGUHS shall be directly responsible for any deficiency in the facilities in the INC guidelines for the above institutes.

19. OPDARD located in hospitals where institutions are associated with clinical facilities. Information to be entered.

Kannada to English Translated by Vidya

20. RGUHS shall ensure from time to time the availability of basic facilities as per INC guidelines.

21.The University shall ensure that the guidelines in the Circular/Order/ Rules/Notification/Regulations/Acts issued by INC/State Government/University/KNC/other concerned authorities from time to time regarding affiliation/sanction etc. are strictly followed by the said Nursing Colleges. In case of violation or misrepresentation, the University shall initiate legal action against the concerned Colleges of Nursing, the concerned Trust/Institution/Association/etc and members of the inspection/recommendation team.

By order of and in the name of the
Governor of Karnataka

(Shivalingaprabhu Vali)
Govt Secretary-2,
Department of Medical Education

For:

1. Chancellor, Rajiv Gandhi University of Health Sciences, Jayanagar, 4th T Block, Bangalore -560 041.

2. The Director, Directorate of Medical Education, BMCRI Old Building, Bangalore.

3.Principal, Shree Siddaganga Institute of Nursing Sciences and Research Center, B.H.Road, Tumkur-572102

4. Branch Defense File / Additional Copies.

Copy:

1. Private Secretary to Hon'ble Minister of Medical Education, Vikas Soudha, Bangalore.

2. Private Secretary to the Principal Secretary to Government, Department of Medical Education.

3. Personal Assistant to Joint Secretary to Govt., Department of Medical Education.

ATTESTED : TRUE COPY

M.SHAFIQ AHAMED. B.A.L.L.B.
ADVOCATE & NOTARY
Govt. of Karnataka
P.H. Colony, Tumakuru

M.SHAFIQ AHAMED B.A.L.L.B., NOTARY Reg.No.311/17 01-01-23 to 31-12-27 ADVOCATE & NOTARY, TUMAKURU

Kannada to English Translated by Vidya